219 (460): ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ರಾಜ್ಯದ ಇತರ ಯಾವ ಯಾವ ಜಿಲ್ಲೆಗಳಲ್ಲಿ ಐಟಿ ಕ್ಷೇತ್ರದ ಉದ್ದಿಮೆಗಳು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿವೆ;

ಆ. ಬೆಂಗಳೂರು ಹೊರತುಪಡಿಸಿ ಇತರೆ ಜಿಲ್ಲೆಗಳಲ್ಲಿ ಸದರಿ ಉದ್ದಿಮೆ ಸ್ಥಾಪಿಸಲು ಸರ್ಕಾರ ನೀಡುತ್ತಿರುವ ಪ್ರೋತ್ಸಾಹಕರ ಕ್ರಮಗಳೇನು;

ಇ. 2003–04 ಮತ್ತು 2004–05ನೇ ಸಾಲಿನಲ್ಲಿ ರಾಜ್ಯದಿಂದ ಎಷ್ಟು ಮೌಲ್ಯದ ಸಾಫ್ಟ್‌ವೇರ್‌ನ್ನು ರಫ್ತು ಮಾಡಲಾಗಿತ್ತು.

ಈ. ಪ್ರಸಕ್ತ ಸಾಲಿನಲ್ಲಿ ಅದರ ಹೆಚ್ಚಳದ ಪ್ರಮಾಣ ಎಷ್ಟು;

ಉ. ಐಟಿ ಮತ್ತು ಬಿಟಿ ಕ್ಷೇತ್ರಗಳಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿಗಾಗಿ ಸರ್ಕಾರದ ನೂತನ ಯೋಜನೆಗಳಾವುವು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ. ರಾಜ್ಯದ ದ್ವಿತೀಯ ದರ್ಜೆ ನಗರಗಳಾದ ಮೈಸೂರು, ಮಂಗಳೂರು. ಉಡುಪಿ, ಹುಬ್ಬಳ್ಳಿ–ಧಾರವಾಡ, ಬೆಳಗಾಂಗಳಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಉದ್ದಿಮೆಗಳು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿವೆ.

ಆ. ಬೆಂಗಳೂರು ಹೊರತುಪಡಿಸಿ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಮಾಹಿತಿ ತಂತ್ರಜ್ಞಾನ ಉದ್ದಿಮೆಗಳನ್ನು ಸ್ಥಾಪಿಸಲು ಸರ್ಕಾರವು ಸಹಸ್ರಮಾನ ಮಾಹಿತಿ ತಂತ್ರಜ್ಞಾನ ಮಾಹಿತಿ ನೀತಿಯಲ್ಲಿ ಘೋಷಿಸಿರುವಂತೆ ರಿಯಾಯಿತಿ/ವಿನಾಯಿತಿಗಳನ್ನು ನೀಡುತ್ತಿದೆ. ಉದಾರಣೆಗೆ ಬಂಡವಾಳ ಸಾಮಾಗ್ರಿಗಳ ಮತ್ತು ಉಪಕರಣಗಳ ಖರೀದಿಗೆ 5 ವರ್ಷಗಳ ಅವಧಿಗೆ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಲಾಗಿರುತ್ತದೆ. ರಿಯಾಯಿತಿ ದರದಲ್ಲಿ ವಿದ್ಯುಚ್ಛಕ್ತಿ ಸರಬರಾಜು, ಧಾರ್ಮಿಕ ಕಾನೂನುಗಳಲ್ಲಿ ಸಡಿಲ ಧೋರಣೆಯನ್ನು ಅನುಸರಿಸಲಾಗುತ್ತಿದೆ.

ಇ. 2003–04ರಲ್ಲಿ ರೂ. 18.100 ಕೋಟಿ ಹಾಗೂ 2004–05ರಲ್ಲಿ ರೂ.27,600 ಕೋಟಿ ಮೌಲ್ಯದ ಸಾಫ್ಟ್‌ವೇರ್‌ನ್ನು ರಫ್ತು ಮಾಡಲಾಗಿದೆ.

ಈ. ಡಿಸೆಂಬರ್ 2005ರ ಅಂತ್ಯಕ್ಕೆ ರೂ. 25,200 ಕೋಟಿಗಳು ಇದ್ದು, ಇದು ಅದರ ಹಿಂದಿನ ವರ್ಷಕ್ಕಿಂತ ಶೇಕಡಾ 30 ರಷ್ಟು ವೃದ್ಧಿಯಾಗಿದೆ.

ಉ. ಐಟಿ ಮತ್ತು ಬಿಟಿ ಕ್ಷೇತ್ರಗಳಲ್ಲಿ ಇನ್ನು ಹೆಚ್ಚಿನ ಅಭಿವೃದ್ಧಿಗಾಗಿ ಸರ್ಕಾರವು ಈ ಕೆಳಕಂಡ ನೂತನ ಯೋಜನೆಗಳನ್ನು ಹಮ್ಮಿಕೊಂಡಿದೆ.

1. ರಾಜ್ಯದ ದ್ವಿತೀಯ ದರ್ಜೆ ನಗರಗಳಾದ ಬೆಳಗಾವಿ, ಮಂಗಳೂರು, ಗುಲ್ಬರ್ಗಾ ಮತ್ತು ಶಿವಮೊಗ್ಗಗಳಲ್ಲಿ ಎಸ್.ಟಿ.ಪಿ.ಐ. ವತಿಯಿಂದ ಭೂ ಕೇಂದ್ರ ಸ್ಥಾಪಿಸಿದ್ದು ಮಾಹಿತಿ ತಂತ್ರಜ್ಞಾನ ಉದ್ದಿಮೆದಾರರಿಗೆ ಮಾಹಿತಿ ತಂತ್ರಜ್ಞಾನ ಪರಷೋಷಣಾ ಕೇಂದ್ರಗಳನ್ನು ಸಹ ತೆರೆಯಲಾಗಿದೆ.

2. ಸರ್ಕಾರವು ಬೆಂಗಳೂರಿನ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪದಲ್ಲಿ ಯಂತ್ರಾಂಶ ತಂತ್ರಜ್ಞಾನ ಪಾರ್ಕ್‌ನ್ನು ಹಾಗೂ ವಿದ್ಯುನ್ಮಾನ ನಗರದಲ್ಲಿ ಜೈವಿಕ ತಂತ್ರಜ್ಞಾನ ಪಾರ್ಕನ್ನು ಸ್ಥಾಪಿಸಲು ಕ್ರಮ ಕೈಗೊಂಡಿದೆ.

3. ಮಾಹಿತಿ ತಂತ್ರಜ್ಞಾನ ಉದ್ದಿಮೆಯ ಅಭಿವೃದ್ಧಿಗಾಗಿ ವ್ಯಾಪಾರಿ ಮೇಳ, ರಸ್ತೆ ಪ್ರದರ್ಶನ ಸಮಾವೇಶಗಳನ್ನು ಹಾಗೂ ಸಮ್ಮೇಳನಗಳನ್ನು ಆಯೋಜಿಸಲಾಗುತ್ತಿದೆ.

220 (170): ಶ್ರೀ ಕೃಷ್ಣಬೈರೇಗೌಡ (ದೇಮಗಲ್)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಕಳೆದ ಸಾಲಿನ ಆಯವ್ಯಯದಲ್ಲಿ ಜೈವಿಕ ತಂತ್ರಜ್ಞಾನ (ಬಯೋಟೆಕ್ನಾಲಜಿ) ಪಾರ್ಕ್‌ಗಳನ್ನು ಸ್ಥಾಪಿಸುವ ಉದ್ದೇಶವನ್ನು ಸರ್ಕಾರ ವ್ಯಕ್ತಪಡಿಸಿದೆಯೇ;

ಆ. ಈ ಬಗ್ಗೆ ಇದುವರೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ. ಯಾವುದಾದರೂ ನೂತನ ಪಾರ್ಕ್‌ನ್ನು ತೆರೆಯಲಾಗಿದೆಯೇ? (ವಿವರ ನೀಡುವುದು)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ. ಹೌದು.

ಆ. ಬೆಂಗಳೂರಿನಲ್ಲಿ ಜೈವಿಕ ತಂತ್ರಜ್ಞಾನ ಪಾರ್ಕನ್ನು ನಿರ್ಮಿಸುವ ಸಲುವಾಗಿ ಬೆಂಗಳೂರಿನ ವಿದ್ಯುನ್ಮಾನ ನಗರದ 3ನೇ ಹಂತದಲ್ಲಿ ಒಟ್ಟು 106 ಎಕರೆ 21 ಗುಂಟೆ ವಿಸ್ತೀರ್ಣದ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ತೆಗೆದುಕೊಂಡಿದೆ. ಈ ಪಾರ್ಕಿನಲ್ಲಿ ಐಬಿಎಬಿ ಸಂಸ್ಥೆ ಹಾಗೂ ಇತರೆ ಸಂಶೋಧನೆ ಮತ್ತು ಅಭಿವೃದ್ಧಿಗೆ/ ತರಬೇತಿ ಸಂಬಂಧಪಟ್ಟ ಕಟ್ಟಡಗಳನ್ನು ನಿರ್ಮಿಸಲು ಅಡಳಿತಾತ್ಮಕ ಅನುಮೋದನೆ ಹಾಗೂ ಟೆಂಡರ್ (Tender) ಕುರಿತಂತೆ ಅಂತಿಮ ನಿರ್ಣಯ ತೆಗೆದುಕೊಳ್ಳುವ ಹಂತದಲ್ಲಿದೆ.

ಇ. ಇಲ್ಲ.